**LAC No**: 83/2010 **P.W**:1

**ದಿನಾಂಕ :03.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ. ಕೆ.ವಿ.ಎನ್. ವಕೀಲರಿಂದಃ-**

ಸಾಕ್ಷಿ ಹೆಚ್ಚುವರಿ ದಾಖಲಾತಿಗಳನ್ನು ನೋಡಿ ಗುರುತಿಸಿದ್ದರಿಂದ, ದಾಖಲಾತಿಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

ಎಲ್.ಎ.ಸಿ. ಅಪೀಲು ನಂ.485/2025ರ ರ ತೀರ್ಪಿನ ಧೃಢೀಕೃತ ನಕಲನ್ನು ನಿಪಿ.22 ಎಂದು, ಎಲ್.ಎ.ಸಿ. ಅಪೀಲು ನಂ.486/2025ರ ರ ತೀರ್ಪಿನ ಧೃಢೀಕೃತ ನಕಲನ್ನು ನಿಪಿ.23 ಎಂದು ಗುರುತಿಸಲಾಯಿತು.

**ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಎಸ್.ಹೆಚ್.ಎಂ. ವಕೀಲರಿಂದ**

ಜಮೀನು ನನ್ನ ಗಂಡ ಯೋಗಣ್ಣರವರ ಹೆಸರಿನಲ್ಲಿ ಭೂಸ್ವಾಧೀನವಾಗಿರುತ್ತದೆ. 30 ವರ್ಷಗಳ ಹಿಂದೆ ಸ್ವಾಧೀನವಾಗಿರುತ್ತದೆ. 2 ಎಕರೆ 6 ಗುಂಟೆ ಜಮೀನು ಸ್ವಾಧೀನವಾಗಿರುತ್ತದೆ. 30 ವರ್ಷಗಳ ಹಿಂದೆ ನಮ್ಮ ಜಮೀನಿನ ಬೆಲೆಗಳು ಗುಂಟೆಗೆ 40 ಸಾವಿರ ರೂ.ಗಳಿದ್ದವು. ಇವತ್ತಿಗೆ ಗುಂಟೆಗೆ ಎರಡೂವರೆ ಯಿಂದ ಮೂರು ಲಕ್ಷ ಬೆಲೆ ಬಾಳುತ್ತವೆ. ನನ್ನ ಊರು ಚನ್ನಾಪುರ. ಚನ್ನಾಪುರದಿಂದ ಹಳೆಕೋಟೆ ಒಂದು ಕಿ ಮೀ ದೂರವಾಗುತ್ತದೆ. ಚನ್ನಾಪುರದಿಂದಹೊಳೆನರಸೀಪುರ 7 ಕಿ ಮೀ ದೂರವಾಗುತ್ತದೆ. 30 ವರ್ಷಗಳ ಹಿಂದೆ ನಿಮ್ಮ ಜಮೀನು 30 ಸಾವಿರ ರೂ. ಬೆಲೆ ಬಾಳುತ್ತಿತ್ತು ಎಂದು ತೋರಿಸಲು ಅಕ್ಕಪಕ್ಕದ ಜಮೀನಿನ ಕ್ರಯಪತ್ರಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಇತ್ತೀಚಿನ ಕೇವಲ 2-3 ವರ್ಷಗಳ ಹಿಂದಿನ ನಿಮ್ಮ ಗ್ರಾಮದ

**LAC No**: 83/2010 **P.W**:1

ಅಥವಾ ಅಕ್ಕಪಕ್ಕದ ಗ್ರಾಮಗಳ ಕ್ರಯಪತ್ರಗಳನ್ನು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಾಗವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಜಮೀನು ಗೊರೂರಿನ ದೊಡ್ಡ ಚಾಲನ್ ಗೆ ಸ್ವಾಧೀನವಾಗಿರುತ್ತದೆ ಎಂದರೆ ಹೌದು. ಸದರಿ ಚಾನಲ್ ಹಳೆಕೋಟೆ ಹೋಬಳಿಯ ಸುಮಾರು ಗ್ರಾಮಗಳ ಮೇಲೆ ಹಾದು ಹೋಗಿದೆ ಎಂದರೆ ಹೌದು.

ಇತ್ತೀಚೆಗೆ 5-6 ವರ್ಷಗಳಿಂದ ನಿಮ್ಮ ಊರಿನ ನಿವೇಶನ ಅಥವಾ ಮನೆಗಳು ರಿಜಿಸ್ಟರ್ ಆಗಿವೆಯೂ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 30 ವರ್ಷಗಳಿಂದ ಇಲ್ಲಿಯವರೆಗೆ ಪ್ರತಿ ವರ್ಷವೂ ನಮ್ಮ ಗ್ರಾಮದ ಜಮೀನು ಮತ್ತು ನಿವೇಶನ, ಮನೆಗಳು ರಿಜಿಸ್ಟರ್ ಆಗುತ್ತಿದ್ದರೂ ಸಹಾ ನನಗೆ ಅನಾನುಕೂಲವಾಗುತ್ತದೆ ಎಂದು ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ತರಿ, ಖುಷಿಕ, ಬಾಗಾಯ್ತು ಜಮೀನುಗಳಿಗೆ ಬೇರೆ ಬೇರೆ ಬಲೆಗಳು ಇರುತ್ತವೆ ಎಂದರೆ ಸರಿಯಲ್ಲ. ಜಮೀನು ರಸ್ತೆ ಪಕ್ಕದಲ್ಲಿ ಇದ್ದರೆ ಒಂದು ಬೆಲೆ, ಸ್ವಲ್ಪ ದೂರದಲ್ಲಿ ಇದ್ದರೆ ಬೇರೆ ಬೆಲೆ ಇರುತ್ತದೆ ಎಂದರೆ ಹೌದು. ನ್ಯಾಯಾಲಯದ ತೀರ್ಪುಗಳನ್ನು ಹೊರತುಪಡಿಸಿ ನಮ್ಮ ಜಮೀನಿಗೆ ಇಷ್ಟೇ ಬೆಲೆ ಬರುತ್ತದೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿಗಳು ಇಲ್ಲ.

ನಮ್ಮಂತೆ ನಮ್ಮ ಗ್ರಾಮದ ಬೇರೆಯಮರ ಜಮೀನುಗಳೂ ಸಹಾ ಚಾನಲ್ ಗಾಗಿ ಭೂಸ್ವಾಧೀನವಾಗಿದೆ ಎಂದರೆ ಹೌದು. ಈ ಹಿಂದೆ ಈ ನ್ಯಾಯಾಲಯ ಮಾಡಿದ ತೀರ್ಪನ್ನು ಇದೇ ನ್ಯಾಯಾಲಯ ರಿಮಾಂಡ್ ಆದ ನಂತರವೂ ಸಹಾ ಅಪ್ಟೇ ಬೆಲೆಯನ್ನು ನೀಡಿದ್ದು, ಸದರಿ ತೀರ್ಪುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರದ ಆಧಾರದ ಮೇಲೆ ಈ ಹಿಂದೆ ಇದೇ ನ್ಯಾಯಾಲಯ ಅದೇಶ ಮಾಡಿರುತ್ತದೆ ಎಂದರೆ ಸರಿಯಲ್ಲ. ನಿಪಿ. 22 ಮತ್ತು 23 ರ ತೀರ್ಪಿನಲ್ಲಿ ಕೋರಿಕೆ ಇಲಾಖೆಯವರಿಗೆ ಸರಿಯಾದ ವಿಳಾಸಕ್ಕೆ ನೋಟಿಸು

**LAC No**: 83/2010 **P.W**:1

ಕಳುಹಿಸದೇ ಇರುವುದರಿಂದ ಸದರಿಯವರು ತಮ್ಮ ಪರವಾಗಿ ತಕರಾರು ಸಲ್ಲಿಸಿಲ್ಲ, ಹೀಗಾಗಿ ಸದರಿ ತೀರ್ಪು ನನಗೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ನಿಪಿ.14 ಮತ್ತು 21 ರ ತೀರ್ಪುಗಳ ಮೇಲೆ ಮಾನ್ಯ ಸರ್ವೋಚ್ಚ ನ್ಯಾಯಾಲಯುದ ಮುಂದೆ ಮೇಲ್ಮನವಿ ಬಾಕಿ ಇರುವುದರಿಂದ ಸದರಿ ತಿರ್ಪು ನನಗೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ.

ನಿಪಿ.17ರ ಕ್ರಯಪತ್ರವು 2019 ಕ್ಕೆ ಸಂಬಂಧಿಸಿದ್ದು, ಆದರೆ ನಮ್ಮ ಜಮೀನು 30 ವರ್ಷಗಳ ಹಿಂದೆ ಸ್ವಾಧೀನವಾಗಿರುವುದರಿಂದ ಸದರಿ ಕ್ರಯಪತ್ರ ನನಗೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ಈಗಾಗಲೇ ಭೂಸ್ವಾಧೀನಾಧಿಕಾರಿಗಳು ನಮ್ಮ ಜಮೀನಿಗೆ ಸಮರ್ಪಕವಾಗಿ ಪರಿಹಾರ ನೀಡಿದ್ದು, ಈ ನ್ಯಾಯಾಲಯ ಈ ಹಿಂದೆ ನೀಡಿದ ಪರಿಹಾರದ ಹಣವು ಸೂಕ್ತವಾಗಿದ್ದು, ನಾನು ಹೆಚ್ಚುವರಿ ಪರಿಹಾರಕ್ಕೆ ಅರ್ಹಳಾಗಿಲ್ಲ ಎಂದರೆ ಸರಿಯಲ್ಲ.

ಎ.ಜಿ.ಪಿ. ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ.ದೆ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.